ಮಲಗಿಯೇ ಕಳೆಯಬಹುದಿತ್ತು. ಈಗಾದರೋ ಗದ್ದೆ ಬಯಲಿನಲ್ಲಿ ಮಲಗಿದಂತೆ ಎಂದು ನಾನು ಗೊಣಗಿದರೂ ಯಾವುದೇ ಪರಿಹಾರ ಇರಲಿಲ್ಲ. ಹೋಗಲಿ ಒಂದೆರಡು ಕಂಬಳಿ ಹೊದಿಕೆಗಳನ್ನಾದರೂ ಹೆಚ್ಚಾಗಿ ಹಾಕಿಕೊಳ್ಳೋಣವೆಂದರೆ ನಾಲ್ಕನೆಯ ದಿನ ಬೆಳಗಾಗೆದ್ದು ಅವುಗಳನ್ನು ತೊಳೆದು ಒಣಗಿಸುವ ಕೆಲಸವಿದೆಯಲ್ಲ . ಅದು ಯಾರಿಗೆ ಬೇಕು!

ನಾನು ಅದೇನೇನೋ ಗೋಲ್ ಮಾಲ್ ಮಾಡಿ ಕಂಬಳಿಯನ್ನೇ ಭರ್ಜರಿ ಹಾಸಿಗೆಯಾಗಿಸಿಕೊಳ್ಳುತ್ತಿದ್ದೆ. ಹೊಸ ಕಂಬಳಿಗಳಿಗೆ ದೋಷವಿಲ್ಲ ಎಂಬುದರ ಜೊತೆ ಬಹಳ ತೊಳೆದರೆ ಕಂಬಳಿ ಹಾಳಾಗುತ್ತದೆ ಎಂದೇನೋ ಹೇಳಿ ಮಹಡಿಯಲ್ಲಿ ಮಲಗುತ್ತಿದ್ದ ಅಣ್ಣಂದಿರ ಸಹಕಾರದಿಂದ ಹೇಗೋ ನಿಭಾಯಿಸುತ್ತಿದ್ದೆ.

ಮದುವೆಯಾದ ಮೇಲೂ ಎಷ್ಟೋ ದಿನ ನನ್ನ ಹಾಸಿಗೆ ಚೌಕಿ ಮೆತ್ತಿನಲ್ಲಿ ನನ್ನನ್ನು ಕಾಯುತ್ತಿತ್ತು. ಆಗಾಗ ಹೋಗುತ್ತಿದ್ದವಳಿಗೆ ಅದು ಅಮ್ಮನ ಮಡಿಲೇ ಆಗಿತ್ತು. ಅನಂತರದಲ್ಲಿ ಯಾವಾಗಲೋ ಅದು ಕಾಣೆಯಾದಾಗ ಓಹ್ ನನ್ನದೊಂದು ಅಸ್ತಿತ್ವ ಇಲ್ಲಿಂದ ಕಳಚಿತೇನೋ ಎಂದುಕೊಂಡರೂ ಮತ್ತೆ ಆ ಭಾವ ಉಳಿಯದೇ ಚಿಕ್ಕಮ್ಮ, 'ಕೂಸೇ ಹೊಸಾದು, ಚೊಲೋ ಹಾಸ್ಗೆ ಹಾಕ್ಯಳೇ' ಎಂದು ತಂದು ಬಿಚ್ಚಿದಳು.

ಬೇಸಿಗೆ ರಜೆ ಬಂತೆಂದರೆ ಮಕ್ಕಳು ಮೊಮ್ಮಕ್ಕಳೆಲ್ಲ ಬಂದು ಮನೆಯ ತುಂಬ ಜನರೋ ಜನರು. ಜೊತೆಗೆ ಕೆಲವೊಮ್ಮೆ ನೆಂಟರಿಷ್ಟರು. ಮದುವೆ ಮುಂಜಿಗಳಲ್ಲಿ ನಮ್ಮದು ಹೊಸ ತಡಿಯಾಗಿದ್ದರೆ ಅದು ಮಾಯವಾಗಿ ಯಾವುದೋ ಹಳೆಯದೊಂದು ಸದ್ದಿಲ್ಲದೆ ಬಿಚ್ಚಿಕೊಂಡಿರುತ್ತಿತ್ತು. ಮೆತ್ತಿನ ಮೇಲೆ ಎರಡು ಮೂರು ಒಳಗಳಲ್ಲಿ ಸಾಲು ಸಾಲಾಗಿ ಬಿಚ್ಚಿದ ಹಾಸಿಗೆಗಳು. ಉದ್ದಾನುದ್ದವಾಗಿ ಬಿಚ್ಚಿದ್ದ ಹಾಸಿಗೆಗಳಿಗೆ ಹರೀ ಹಾಸಿಗೆ ಎಂದು ಕರೆಯುವುದಿತ್ತು. ನಡುಮನೆಗಳಲ್ಲಿ ಮಲಗುವವರೆಂದರೆ ಮೆತ್ತು ಹತ್ತಲಾರದ ಮತ್ತು ನಡುವೆ ಏಳುವ ಹಿರಿಯರಾಗಿರುತ್ತಿದ್ದರು.

ಆದರೆ ಮೆತ್ತುಗಳದೇ ಬೇರೆಯ ಲೋಕ. ಜಗಲಿ ಮೆತ್ತು, ಚೌಕಿ ಮೆತ್ತು ಹೀಗೆಲ್ಲಾ ಇರುತ್ತಿತ್ತು. ರಾತ್ರಿ ಅಲ್ಲಿ ಬಿಚ್ಚಿದ ಹಾಸಿಗೆಯ ಮೇಲೆ ಅಡ್ಡಾದಿಡ್ಡಿ ಬಿದ್ದ ಮಕ್ಕಳೊಂದು ಕಡೆ ಗದ್ದಲ ನಡೆಸಿದರೆ ಮತ್ತೊಂದೆಡೆ ಕುಳಿತೋ ಮಲಗಿಯೋ ದೊಡ್ಡವರ ಪ್ರಪಂಚ ತೆರೆದುಕೊಳ್ಳುತ್ತಿತ್ತು. ಅಕ್ಕಂದಿರು, ಅತ್ತಿಗೆಯರು ಯಾರಾದರೂ ಬಂದರೆಂದರೆ ಅವರ ಸುದ್ದಿಯನ್ನು ಕೇಳಲು ಅಮ್ಮ ಚಿಕ್ಕಮ್ಮಂದಿರು ಕೆಲವೊಮ್ಮೆ ಅಣ್ಣಂದಿರೂ ಬಂದು ಕುಳಿತಿರುತ್ತಿದ್ದರು. ಹಾಸಿಗೆ ಎಂಬುದು ನಿಧಾನವಾಗಿ ಲೋಕಾಂತಕ್ಕೆ ತೆರೆದುಕೊಳ್ಳುತ್ತಿತ್ತು... ಪುರಾಣ, ಪುಣ್ಯ ಕಥೆಗಳು, ಗೀತಗಾಯನಗಳು ಹೊಸತಾಗಿ ಕಲಿತಿದ್ದು, ಹಳೆಯದೆಲ್ಲ ನೆನಪಾಗಿದ್ದು ಎಲ್ಲಾ ಹಾಸಿಗೆಯ ಮೇಲೆ ಕುಳಿತು ಅರೆಮಲಗಿ ಪ್ರದರ್ಶನಗೊಳ್ಳುತ್ತಿದ್ದವು.

ಕೆಲವೊಮ್ಮೆ ಜಗದ ಜಗಲಿಯಾಗಿ, ಮತ್ತೆ ಕೆಲವೊಮ್ಮೆ ವೈರಾಗ್ಯ ಶತಕಗಳು, ಮತ್ತೆ ಕೆಲವು ಸಲ ಬಹಳ ಲಘುವಾದ ವಿಚಾರಗಳೂ ಯಾರೋ ಓಡಿ ಹೋಗಿದ್ದು ಓಡಿ ಬಂದಿದ್ದು, ಪ್ರೇಮಕಥಾನಕಗಳು, ಅತ್ತೆ ಮನೆಯ ಸುದ್ದಿಗಳೂ ಒಂದೆರಡಲ್ಲ ಎಲ್ಲವೂ ಇಲ್ಲಿ ಸುರುಳಿ ಸುರುಳಿಯಾಗಿ ನೆನಪಾದ ಹಾಗೆಲ್ಲ ಬಿಚ್ಚಿಕೊಳ್ಳುತ್ತಿದ್ದವು. ಚಳಿಗಾಲವಾದರೆ ಮುಖ ಮಾತ್ರ ಕಾಣುವಂತೆ ಬಿಟ್ಟು ಉಳಿದಂತೆ ಹೊದಿಕೆಯನ್ನು ಸುತ್ತಿಕೊಂಡು ಕಥೆ ಕೇಳುವ ಪರಿ ಇದೆಯಲ್ಲಾ ಅದರ ಸೊಗಸೇ ಬೇರೆ.

ಚಳಿಗಾಲ ಮತ್ತು ಮಳೆಗಾಲದಲ್ಲಿ ಹತ್ತಿಯ ಹಾಸಿಗೆಯ ಮೇಲೆ ಬೆಚ್ಚಗೆ ಹೊದ್ದು ರೇಡಿಯೊ ಕೇಳುವ, ಕಥೆಗಳನ್ನೋದುವ ಸುಖ ಅನುಭವಿಸಿದವರಿಗೇ ಗೊತ್ತು. ನಾನು ಹಾಸಿಗೆಯೊಳಗೆ ಟ್ರಾನ್ಸಿಸ್ಟರ್ ಇರಿಸಿಕೊಂಡು ನಡುರಾತ್ರಿಯಲ್ಲೂ ಸಂಗೀತ ಕೇಳುತ್ತಿದ್ದೆ. ಕ್ಷೀರ ಸಾಗರ ಶಯನಾ ಕೀರ್ತನೆ ದೇವಗಾಂಧಾರಿ ರಾಗದಲ್ಲಿ ಅಲೆಅಲೆಯಾಗಿ ಹೊಮ್ಮುತ್ತಿದ್ದರೆ ಆಹಾ ಎಂತ ಸುಖ.

ಮಲಗಿ ಎದ್ದ ನಂತರ ಹಾಸಿಗೆಯನ್ನು ಹೇಗೆ ಸುತ್ತಿಡುತ್ತಾರೆ ಎಂಬುದರ ಮೇಲೇ ಅವರೆಷ್ಟು ಶಿಸ್ತಿನವರು ಎಂದು ಗೊತ್ತಾಗಿ ಬಿಡುತ್ತಿತ್ತು. ಹಾಸಿಗೆ ಸುತ್ತುವುದರಲ್ಲೂ ಕ್ರಮವಿದೆ. ಕಾಲಕಡೆಯಿಂದ ಇಲ್ಲವೇ ತಲೆಯಕಡೆಯಿಂದ ಸುತ್ತಬೇಕಲ್ಲವೇ. ಆದರೆ ತಲೆ ಮತ್ತು ಕಾಲು ಎರಡೂ ಕಡೆಯಿಂದಲೂ ಮಡಿಸುವುದೂ ಉಂಟು. ಬೆಳಿಗ್ಗೆ ಎದ್ದವರು ಹಾಸಿಗೆ ಹಾಗೇ ಬಿಟ್ಟು ಬಂದರೆಂದರೆ ಅವರಷ್ಟು ಜೋಬದ್ರರು ಸೋಮಾರಿಗಳು ಬೇರಾರೂ ಇಲ್ಲ ಎಂಬ ಹಾಗೆ.

ಸಾಮಾನ್ಯವಾಗಿ ನಮ್ಮ ಮನೆಯಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪ ಕೆಲವು ಪತ್ರಗಳನ್ನು ಫೋಟೊ

